**OS-18/2018**
**DW-1**

**ದಿನಾಂಕಃ 29.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ **ವಾದಿ ಪರ** ಶ್ರೀ ಪಿ ಎಸ್ **ವಕೀಲರಿಂದಃ**

ಸರ್ವೆ ನಂ.83/2 ಬಿ ಯಲ್ಲಿ 30 ಗುಂಟೆ ಜಮೀನನ್ನು ನಾನು ವೈಯಕ್ತಿಕವಾಗಿ ದನದ ಕೊಟ್ಟಿಗೆ ಮತ್ತು ವಾಸದ ಮನೆಯನ್ನು ನಿರ್ಮಿಸಲು ವ್ಯವಸಾಯದ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿಸಿಕೊಂಡಿದ್ದೆನು. ನಂತರ ಸದರಿ ಸರ್ವೆ ನಂ. 83/2 ಬಿ ಯಲ್ಲಿ 30 ಗುಂಟೆ ಜಮೀನು ಅನ್ಯಕ್ರಾಂತ ಆದ ನಂತರ ಸದರಿ ಜಮೀನಿನಲ್ಲಿ ನಿವೇಶನಗಳನ್ನು ವಿಂಗಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತೇನೆ ಎಂದು ತಿಳಿಸಿ ಪುರಸಭೆಯಿಂದ ಅನುಮತಿ ಪಡೆದುಕೊಂಡಿರುತ್ತೇನೆ. ಸದರಿ ಅನುಮತಿ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಯಾವುದೇ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕೆ ಮತ್ತು ನಿವೇಶನಗಳನ್ನು ವಿಂಗಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿಸಿದಾಗ ಸದರಿ ಲೇಔಟ್ ನಲ್ಲಿ ರಸ್ತೆಯನ್ನು, ಪಾರ್ಕ್ ಅನ್ನು ಮತ್ತು ಇನ್ನಿತರ ಜಾಗವನ್ನು ಸಾರ್ವಜನಿಕರ ಮುಕ್ತ ಬಳಕೆಗೆ ಬಿಟ್ಟು ಸದರಿ ಪಾರ್ಕ್ ಮತ್ತು ರಸ್ತೆಯನ್ನು ರಾಜ್ಯಪಾಲರಿಗೆ ಮತ್ತು ಸ್ಥಳೀಯವಾಗಿ ಪುರಸಭೆಯವರಿಗೆ ಪತ್ರ ಬರೆದುಕೊಡಬೇಕು ಎಂದರೆ ಸಾಕ್ಷಿದಾರರು 20 ಅಡಿ ರಸ್ತೆಯನ್ನು ಬಿಟ್ಟಿದ್ದೇವೆ ಎಂದು ನುಡಿಯುತ್ತಾರೆ. ಸದರಿ 20 ಅಡಿ ರಸ್ತೆಯನ್ನು ಪುರಸಭೆಯವರಿಗೆ ಬಿಟ್ಟು ಕೊಟ್ಟಿರುವ ವಿಚಾರವಾಗಿ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

ದಿನಾಂಕ 30.12.2002 ರಂದು ಪೂರ್ವ ಪಶ್ಚಿಮ 80 ಅಡಿ ಉತ್ತರ ದಕ್ಷಿಣ 20 ಅಡಿ ಜಾಗವನ್ನು ನಾನು ಸುಂದ್ರಮ್ಮ ಮತ್ತು ಪ್ರಕಾಶ್ ರವರಿಂದ ಖರೀದಿಸಿದ ಸಂಧರ್ಭದಲ್ಲಿ ಸುಂದ್ರಮ್ಮರವರ ಗಂಡ ಮಹದೇವರವರು ಬದುಕಿದ್ದರು ಎಂದರೆ ಸರಿ. ಸದರಿ ಸುಂದ್ರಮ್ಮ ಮತ್ತು ಮಹದೇವರವರಿಗೆ ರವಿ, ಸೋಮಶೇಖರ ಮತ್ತು ಆನಂದ ಎಂಬ ಮೂರು ಜನ ಮಕ್ಕಳು ಇದ್ದರು ಎಂದರೆ ಸರಿ. ಸದರಿ ನಿಪಿ-7 ರ ದಿನಾಂಕ 30.12.2002 ರ ಕ್ರಯ ಪತ್ರಕ್ಕೆ ರವಿ, ಸೋಮಶೇಖರ ಮತ್ತು ಆನಂದರವರು ಸಹಿ ಮಾಡಿರುವುದಿಲ್ಲ. ನಿಡಿ-9 ರಂತೆ ನಾನು ಪ್ರಕಾಶ, ಸುಂದ್ರಮ್ಮ ಮತ್ತು ಮಹದೇವುರವರ ವಿರುದ್ಧ ಅಸಲು ದಾವಾ ಸಂ.159/2000 ರಂತೆ ದಾವೆ ಸಲ್ಲಿಸಿದಾಗ ಪ್ರಕಾಶ್ ರವರನ್ನು ಸದರಿ ಪೂರ್ವ ಪಶ್ಚಿಮ 40 ಅಡಿ, ಉತ್ತರ

ದಕ್ಷಿಣ 20 ಅಡಿ ಜಾಗವನ್ನು ಖರೀದಿಸಿದ್ದಾರೆ ಎಂದು ಪಕ್ಷಗಾರರಾಗಿ ಮಾಡಿದ್ದೀರಾ ಎಂದರೆ ಸಾಕ್ಷಿದಾರರು ಸದರಿ ಪ್ರಕಾಶ್ ರವರು ರಸ್ತೆಯನ್ನು ಬಿಡದೆ ಮನೆಯನ್ನು ಕಟ್ಟಲು ಪ್ರಯತ್ನಿಸಿದ್ದರಿಂದ ಪಕ್ಷಗಾರರನ್ನಾಗಿ ಮಾಡಿದ್ದೆನು ಎಂದು ನುಡಿಯುತ್ತಾರೆ. ಸದರಿ ಅಸಲು ದಾವಾ ಸಂ.159/2000 ರ ದಾವೆಯನ್ನು ಸದರಿ 40 X 20 ಅಡಿ ಜಾಗವನ್ನು ರಸ್ತೆ ಎಂದು ನಾನು ದಾವೆ ಸಲ್ಲಿಸಿದ್ದೆನು. ನಾನು ಅಸಲು ದಾವಾ ಸಂ.159/2000 ರ ದಾವೆಯನ್ನು ಸಲ್ಲಿಸಿದಾಗ ಸದರಿ 40X20 ಅಡಿ ಜಾಗವು ರಸ್ತೆಯಾಗಿತ್ತು. ನಿಡಿ-7 ರ ದಿನಾಂಕ 30.12.2006 ರ ಕ್ರಯ ಪತ್ರದಂತೆ 80X20 ಅಡಿ ಜಾಗವನ್ನು ರಸ್ತೆಯ ಉದ್ದೇಶಕ್ಕಾಗಿ ನಾನು ಖರೀದಿಸಿದ್ದೆನು. ಸದರಿ ಅಸಲು ದಾವಾ ಸಂ.159/2000 ರ ದಾವೆಯು ರಾಜಿಯಾಗಿದ್ದರಿಂದ ನಾವು ದಿನಾಂಕ 05.09.2003 ರಂದು ಮೆಮೊ ಸಲ್ಲಿಸಿ ಸದರಿ ದಾವೆಯನ್ನು ನಾವು ವಜಾ ಮಾಡಿಸಿಕೊಂಡಿದ್ದೇವೆ. ಸದರಿ ಅಸಲು ದಾವಾ ಸಂ.159/2000 ರ ದಾವೆಯಲ್ಲಿ ಪ್ರಕಾಶ, ಸುಂದ್ರಮ್ಮ ಮತ್ತು ಮಹದೇವರವರು ದಾವೆಯಲ್ಲಿ ಹಾಜರಾಗಿ ರಾಜಿಯ ವಿಚಾರವಾಗಿ ಯಾವುದೇ ಮೆಮೊ ಸಲ್ಲಿಸಿರುವುದಿಲ್ಲ. ಸದರಿ ಮೆಮೊದಲ್ಲಿ ನನ್ನ ಮತ್ತು ಪ್ರತಿವಾದಿಗಳ ನಡುವೆ ಕ್ರಯ ಪತ್ರ ಆದ ಬಗ್ಗೆ ಮತ್ತು ಯಾವ ರೀತಿ ರಾಜಿಯಾಗಿದೆ ಎಂಬ ವಿಚಾರವನ್ನು ನಮೂದಿಸಿರುವುದಿಲ್ಲ. ದಿನಾಂಕ 05.09.2003 ರಂದು ನ್ಯಾಯಾಲಯಕ್ಕೆ ನಾವು ಮೆಮೊ ಸಲ್ಲಿಸಿದಾಗ ದಿನಾಂಕ 30.12.2002 ರ ಕ್ರಯಪತ್ರವಾಗಿತ್ತು ಮತ್ತು ಸದರಿ ದಾಖಲಾತಿ ನನ್ನ ಬಳಿ ಇತ್ತು. ಸದರಿ ಅಸಲು ದಾವಾ ಸಂ.159/2000 ರಲ್ಲಿ ನಾವು ನ್ಯಾಯಾಲಯಕ್ಕೆ ಮೆಮೊ ಸಲ್ಲಿಸಿದಾಗ ದಿನಾಂಕ 30.12.2002 ರ ಕ್ರಯ ಪತ್ರದ ನಕಲನ್ನು ಹಾಜರುಪಡಿಸಿರುವುದಿಲ್ಲ.

ಸುಂದ್ರಮ್ಮ ಮತ್ತು ಪ್ರಕಾಶ್ ರವರು ಸಂಬಂಧಿಕರಲ್ಲ ಎಂದರೆ ಸರಿಯಲ್ಲ. ದಿನಾಂಕ 14.06.1996 ರ ಕ್ರಯ ಪತ್ರದ ಮೂಲಕ ಪ್ರಕಾಶ್ ರವರು 1 ನೇ ವಾದಿ ಸುಂದ್ರಮ್ಮರವರಿಂದ 40 x 40 ಅಳತೆಯ ಖಾಲಿ ಜಾಗವನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿದಾರರು ಪ್ರಕಾಶ್ ರವರ ಅವರ ತಾತನಿಂದ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಂತರ ಸದರಿ ಪ್ರಕಾಶ್ ರವರು ತಾವು ಖರೀದಿಸಿದ್ದ 40 x 40 ಅಳತೆಯ ಖಾಲಿ ನಿವೇಶನದಲ್ಲಿ 20 x 40 ಅಳತೆಯ ಖಾಲಿ ನಿವೇಶನವನ್ನು 5 ನೇ ವಾದಿಗೆ ದಿನಾಂಕ 10.03.2003 ರ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಡಿ-7 ರ ದಿನಾಂಕ 30.12.2002 ರ ಕ್ರಯ ಪತ್ರದಲ್ಲಿ ನಿವೇಶನ ಸಂಖ್ಯೆ3 ಎಂದು ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

1 ನೇ ವಾದಿಗೆ ಅವರ ಮಾವನಿಂದ 8 ಗುಂಟೆ ಜಮೀನು ಬಂದಿತ್ತು ಎಂದರೆ ಸರಿ. ಸದರಿ 8 ಗುಂಟೆ ಜಮೀನನ್ನು 1 ನೇ ವಾದಿಯು ವ್ಯವಸಾಯದ ಉದ್ದೇಶದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿಸಿದ್ದರು ಎಂದರೆ ಸರಿ. ಸದರಿ 8 ಗುಂಟೆ ಜಮೀನು ಅನ್ಯಕ್ರಾಂತ ಆದ ನಂತರ ಸದರಿ ಜಾಗದಲ್ಲಿ ರಸ್ತೆಯ ಪಕ್ಕದಲ್ಲಿ 1 ರಿಂದ 4 ರಂತೆ ನಿವೇಶನಗಳನ್ನು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನಿವೇಶನಗಳನ್ನು 1 ನೇ ವಾದಿಯು ವಿಂಗಡಿಸಿದಾಗ ಸದರಿ ನಿವೇಶನಗಳಲ್ಲಿ 40 x 40 ಅಡಿ ಅಳತೆಯ ನಿವೇಶನ ಸಂಖ್ಯೆ3 ಅನ್ನು ಪ್ರಕಾಶ್ ರವರ ಖರೀದಿಸಿ ನಿವೇಶನ ಸಂಖ್ಯೆ3 ರಲ್ಲಿ 20 x 40 ಅಡಿ ಅಳತೆಯ ನಿವೇಶನವನ್ನು 5 ನೇ ವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸಾಮಾನ್ಯವಾಗಿ ಸಂಬಂಧಿಕರು ಕ್ರಯ ಪತ್ರವನ್ನು ಬರೆದುಕೊಟ್ಟರೆ ಒಂದೇ ಪತ್ರವನ್ನು ಬರೆದುಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸಂಬಂಧಿಕರಲ್ಲದ ವ್ಯಕ್ತಿಗಳು ಕ್ರಯ ಪತ್ರವನ್ನು ಬರೆದುಕೊಟ್ಟರೇ ಬೇರೆ ಬೇರೆ ಪತ್ರಗಳ ಮೂಲಕ ಬರೆದುಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 30.12.2002 ರ ಕ್ರಯ ಪತ್ರವನ್ನು ಪ್ರಕಾಶ್ ಮತ್ತು ಸುಂದ್ರಮ್ಮರವರಿಂದ ಬೇರೆ ಬೇರೆಯಾಗಿ ಬರೆಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಇಬ್ಬರು ಜಂಟಿಯಾಗಿ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ದಿನಾಂಕ 30.12.2002 ರ ಕ್ರಯ ಪತ್ರವನ್ನು ಬರೆದುಕೊಡುವ ಸಂಧರ್ಭದಲ್ಲಿ ಸುಂದ್ರಮ್ಮ, ಪ್ರಕಾಶ,ಮಹದೇವ ಮತ್ತು ಅವರ ಸಹೋದರ ಬಂದಿದ್ದರು. ದಿನಾಂಕ 30.12.2002 ರ ಕ್ರಯ ಪತ್ರಕ್ಕೆ ಸುಂದ್ರಮ್ಮ ಮತ್ತು ಪ್ರಕಾಶ್ ರವರ ಸಹಿ ಹೊರತುಪಡಿಸಿ ಬೇರೆ ಯಾರ ಸಹಿ ಇಲ್ಲ ಎಂದರೆ ಸರಿ. ಸದರಿ ದಿನ ಬೇರೆ ಯಾವ ವ್ಯಕ್ತಿಗಳು ಕ್ರಯ ಪತ್ರ ಬರೆದುಕೊಡುವ ಸಂಧರ್ಬದಲ್ಲಿ ಹಾಜರಿದ್ದರು ಎಂದು ನನಗೆ ನೆನಪಿಲ್ಲ. ಸದರಿ ದಿನಾಂಕ 30.12.2002 ರ ಕ್ರಯ ಪತ್ರವನ್ನು ಯಾರು ತಯಾರಿಸಿದರು ಎಂದು ನನಗೆ ನೆನಪಿಲ್ಲ. ಸದರಿ ದಿನಾಂಕ 30.12.2002 ರ ಕ್ರಯ ಪತ್ರದಲ್ಲಿ ರಸ್ತೆಯ ಉದ್ದೇಶಕ್ಕಾಗಿ ಖರೀದಿ ಮಾಡಿದ್ದೇನೆ ಎಂದು ನಮೂದಾಗಿಲ್ಲ ಎಂದರೆ ಸರಿ. ದಿನಾಂಕ 30.12.2002 ರ ಕ್ರಯ ಪತ್ರದ ದಿನಾಂಕದಂದು ಪ್ರಕಾಶ್ ರವರು ಸುಂದ್ರಮ್ಮರವರನ್ನು ಸಮ್ಮತಿ ಸಾಕ್ಷಿದಾರರಾಗಿ ಸಹಿ ಮಾಡಬೇಕು ಎಂದು ಉಪ ನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕಾಶ್ ರವರು ಸುಂದ್ರಮ್ಮರವರನ್ನು ಸಮ್ಮತಿ ಸಾಕ್ಷಿದಾರರಾಗಿ ಉಪ ನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದಿದ್ದರಿಂದ ಸದರಿ

ಸುಂದ್ರಮ್ಮರವರ ಗಂಡ ಮಹದೇವ ಮತ್ತು ಅವರ ಮಕ್ಕಳಾದ ಸೋಮಶೇಖರ, ಆನಂದ ಮತ್ತು ರವಿರವರನ್ನು ಉಪ ನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು, ಪ್ರಕಾಶ ಮತ್ತು ಸಾಕ್ಷಿದಾರರು ಸೇರಿ ದಿನಾಂಕ 30.12.2002 ರ ಕ್ರಯ ಪತ್ರಕ್ಕೆ ಸುಂದ್ರಮ್ಮರವರನ್ನು ಸಾಕ್ಷಿದಾರನ್ನಾಗಿ ಸಹಿ ಮಾಡಿ ಎಂದು ತಿಳಿಸಿ ಸಹಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಸುಂದ್ರಮ್ಮರವರಿಗೆ ಗೊತ್ತಾಗದಂತೆ ನಾನು, ಪ್ರಕಾಶ ಮತ್ತು ಸಾಕ್ಷಿದಾರರು ಸೇರಿಕೊಂಡು ಕ್ರಯ ಪತ್ರವನ್ನು ಮೋಸ ಮಾಡಿ ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

1 ನೇ ವಾದಿಯು ದಿನಾಂಕ 06.09.2017 ರಂದು ತಮ್ಮ ಜಾಗದಲ್ಲಿ ಮೆಟ್ಟಿಲುಗಳನ್ನು ಕಟ್ಟುತ್ತಿದ್ದರು ಎಂದರೆ ಸಾಕ್ಷಿದಾರರು ರಸ್ತೆಯಲ್ಲಿ ಸದರಿ ಮೆಟ್ಟಿಲುಗಳನ್ನು ಕಟ್ಟಲು ಪ್ರಯತ್ನಿಸಿದ್ದರು ಎಂದು ನುಡಿಯುತ್ತಾರೆ. ನಂತರ ನನ್ನ ಅರ್ಜಿಯ ಮೇರೆಗೆ ಪುರಸಭೆಯವರು ವಾದಿಗಳಿಗೆ ನೋಟೀಸ್ ನೀಡಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ನೋಟೀಸ್ ಗೆ 1 ನೇ ವಾದಿಯು ಉತ್ತರ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ 2017 ರಲ್ಲಿ 1 ನೇ ವಾದಿಯು ಪುರಸಭೆಗೆ ಹೋಗಿ ದಾಖಲಾತಿಗಳನ್ನು ಪರಿಶೀಲಿಸಿ ನೋಡಿದಾಗ ದಿನಾಂಕ 30.12.2002 ರಂದು ನಾನು ಮೋಸ ಮಾಡಿ ಕ್ರಯ ಪತ್ರ ಬರೆಸಿಕೊಂಡಿರುವ ವಿಚಾರ 1 ನೇ ವಾದಿಗೆ ತಿಳಿಯಿತು ಎಂದರೆ ಸರಿಯಲ್ಲ. ನಂತರ ವಾದಿಗೆ ನಾನು ಮೋಸ ಮಾಡಿ ಕ್ರಯ ಪತ್ರ ಬರೆಸಿಕೊಂಡಿರುವ ವಿಚಾರ 2017 ರಲ್ಲಿ ವಾದಿಗೆ ತಿಳಿದ ನಂತರ ಸಂಬಂಧಪಟ್ಟ ಇಲಾಖೆಗಳಿಂದ ದಾಖಲಾತಿಗಳನ್ನು ಪಡೆದುಕೊಂಡು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ಈ ದಾವೆ ಸಲ್ಲಿಸಿದ ನಂತರ ನಾನು ಪುರಸಭೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಿಡಿ-1 ಮತ್ತು ನಿಡಿ-5 ರಲ್ಲಿ ತೋರಿಸಿರುವಂತೆ ರಸ್ತೆಯನ್ನು ನಿರ್ಮಾಣ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಿಡಿ-1 ಮತ್ತು 5 ರಲ್ಲಿ ತೋರಿಸಿರುವಂತೆ ಸದರಿ ರಸ್ತೆಯನ್ನು ನಾವು ಎಂದಿಗೂ ರಸ್ತೆಯಾಗಿ ಉಪಯೋಗಿಸಿರಲಿಲ್ಲ ಎಂದರೆ ಸರಿಯಲ್ಲ. ವಿದ್ಯೋದಯ ಕಾಲೇಜಿನ ಕಾಂಪೌಂಡ್ ನ ಹಿಂಭಾಗದಲ್ಲಿರುವ ಗ್ಯಾಸ್ ಅಂಗಡಿ ಮುಂಭಾಗದಲ್ಲಿರುವ ಜಾಗವನ್ನು ನಾವು ಈ ಹಿಂದೆ ರಸ್ತೆಯಾಗಿ ಉಪಯೋಗಿಸುತ್ತಿದ್ದೆವು ಎಂದರೆ ಸಾಕ್ಷಿದಾರರು ಈ ಹಿಂದೆ ಸದರಿ ಜಾಗವು ಖಾಲಿ ಇದ್ದುದ್ದರಿಂದ ನಾವು ಓಡಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಿಡಿ-7 ರಂತೆ ನಾನು ಖರೀದಿಸಿದ ಜಾಗದ ಅಕ್ಕಪಕ್ಕದಲ್ಲಿ ನಾಗೇಂದ್ರಪ್ಪ ಎಂಬುವವರ

ನಿವೇಶನ ಇರಲಿಲ್ಲ. ನಾನು ಸುಳ್ಳು ಚೆಕ್ಕುಬಂಧಿಗಳನ್ನು ಆಧರಿಸಿ ದಿನಾಂಕ 30.12.2002 ರ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲಾತಿಯನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ